# ಗ್ರಾಮಸೇವಾ ಯಜ್ಞ

**ಎಸ್. ಪಟ್ಟಾಭಿರಾಮನ್**



'ರಾಷ್ಟ್ರ ಗುಡಿಸಲಿನಲ್ಲಿ ವಾಸಿಸುತ್ತಿದೆ ಎಂಬುದನ್ನು ನೆನಪಿನಲ್ಲಿಡಿ. ರಾಷ್ಟ್ರದ ಭವಿಷ್ಯ ಜನಸಮಾನ್ಯರ ಸ್ಥಿತಿಯನ್ನು ಅವಲಂಬಿಸಿದೆ,' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಅವರ ಕರೆಗೆ ಓಗೊಟ್ಟು ಅನೇಕ ಸಂಸ್ಥೆಗಳು ಗ್ರಾಮಸೇವಾ ಕಾರ್ಯದಲ್ಲಿ ತೊಡಗಿವೆ. ಅಂತಹ ಒಂದು ಸಂಸ್ಥೆಯ ಕಿರು ಪರಿಚಯ ಮಾಡಿ ಕೊಟ್ಟಿರುವ ಪಟ್ಟಾಭಿರಾಮನ್ ಅವರು ಹಿರಿಯ ಪತ್ರಿಕೋದ್ಯಮಿಗಳು.

**ಬೆಂಗಳೂರು** ಮಹಾನಗರಕ್ಕೆ ಕೇವಲ ೩೦ ಕಿ.ಮೀ. ದೂರ. ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿಗೆ ಸೇರಿದ ಶಿವನಹಳ್ಳಿ ಮತ್ತು ರಾಗಿಹಳ್ಳಿ ಹಾಗೂ ೧೮ ಕುಗ್ರಾಮಗಳಲ್ಲಿ ಈ ಸೇವಾಕಾರ್ಯ ವ್ಯಾಪಿಸಿದೆ. ಹದಿನೈದು ವರ್ಷಗಳ ಹಿಂದೆ ಇಲ್ಲಿನ ಗ್ರಾಮೀಣ ಜನರ ಬದುಕು ಬರಡಾಗಿತ್ತು. ಒಂದು ಕಡೆ ಬೆಟ್ಟ-ಗುಡ್ಡಗಳಿಂದ ಆವೃತವಾದ ಬೆಂಗಾಡು—ಇನ್ನೊಂದು ಕಡೆ ಬನ್ನೇರಘಟ್ಟ ವನ್ಯ ಪ್ರದೇಶ. ಈ ಮಧ್ಯೆ ಯಾವುದೇ ಸೌಲಭ್ಯವೂ ಇಲ್ಲದ, ಎಲ್ಲ ಅವಕಾಶಗಳಿಂದಲೂ ವಂಚಿತರಾದ ಮುಗ್ಧ ಜನ. ಜೊತೆಗೆ ರೋಗ-ರುಜಿನ, ಅವಿದ್ಯೆಗೆ ಬಲಿಯಾಗಿ ಕಳಾಹೀನರಾಗಿದ್ದ ಅಂಧಕಾರಮಯವಾದ ಬದುಕು ಇವರದಾಗಿತ್ತು. ಇವರಿಗೆ ಕೆರೆ-ಕಟ್ಟೆಗಳಾಗಲೀ, ಜಲಾಶಯವಾಗಲೀ ಇರಲಿಲ್ಲ. ಮಳೆಯೇ ಇವರ ಭೂಮಿ, ಬದುಕಿಗೆ ಆಸರೆ. ಎಕರೆಗೆ ೪೦-೫೦ ಕೆ.ಜಿ. ರಾಗಿ ಬೆಳೆದರೆ ಅದೇ ಹೆಚ್ಚು.

ಇಂದು ಈ ಕುಗ್ರಾಮಗಳಲ್ಲಿ ಮೌನಕ್ರಾಂತಿ ನಡೆದಿದೆ. ೧೯೮೫ರಲ್ಲಿ ಗ್ರಾಮೀಣ ಜನರ ಸರ್ವತೋಮುಖ ಅಭಿವೃದ್ಧಿ ಆಗಬೇಕೆಂಬ ಸ್ವಾಮಿ ವಿವೇಕಾನಂದರ ಸಂದೇಶವನ್ನು ಹೊತ್ತು ಬೆಂಗಳೂರು ರಾಮಕೃಷ್ಣ ಮಠದ ಐದು ಮಂದಿ ಭಕ್ತರು ಆರಂಭಿಸಿದ **'ಶ್ರೀರಾಮಕೃಷ್ಣ ಗ್ರಾಮಕ್ಷೇಮ ಟ್ರಸ್ಟ್'** ಮತ್ತು ಬಳಿಕ ಆಶ್ರಮದ ಹಿರಿಯ-ಕಿರಿಯ ಸ್ವಾಮಿಗಳ ಹಾಗೂ ಭಕ್ತರ ಅವಿರತ ಶ್ರಮ-ಸಮಯ ದಾನದ ಫಲವಾಗಿ ಇಂದು ಈ ಹದಿನಾರು ಗ್ರಾಮಗಳಿಗೆ ವಿದ್ಯುಚ್ಛಕ್ತಿ ಪೂರೈಕೆಯಾಗಿದೆ. ಈಗ ಭೂಮಿಯ ಕೃಷಿ ಆಧುನಿಕ ರೀತಿಯಲ್ಲಿ ನಡೆಯುತ್ತಿದೆ. ಜನರಲ್ಲಿ ಹಿಂದೆ ಇದ್ದ ರೋಗ ರುಜಿನಗಳು ಈಗ ಕಾಣುತ್ತಿಲ್ಲ. ಮೈಮೇಲೆ ಬಟ್ಟೆಯಿಲ್ಲದ ಮಕ್ಕಳು ಸಮವಸ್ತ್ರದಿಂದ ಭೂಷಿತರಾಗಿ ಆಟ-ಪಾಠಗಳ ಮೂಲಕ ತಮ್ಮ ಜೀವನವನ್ನು ಹಸನು ಮಾಡಿಕೊಳ್ಳುತ್ತಿದ್ದಾರೆ.

ಶಿವನಹಳ್ಳಿಯಲ್ಲಿ ಒಂದರಿಂದ ಏಳನೆ ತರಗತಿವರೆಗೆ **ಶ್ರೀರಾಮಕೃಷ್ಣ ವಿದ್ಯಾಕೇಂದ್ರ**'ನಡೆಯುತ್ತಿದೆ. ಇದಕ್ಕೆ ಪೂರಕವಾಗಿ ಶಿಶುವಿಹಾರವಿದೆ. ಶ್ರೀರಾಮಕೃಷ್ಣ ಮಠ ಮತ್ತು ಮಿಷನ್ನಿನ ಹಾಲಿ ಅಧ್ಯಕ್ಷರಾಗಿರುವ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರೇ ೧೯೮೫ ನವೆಂಬರ್ ೨ರಂದು ಈ ಶಿಶುವಿಹಾರವನ್ನು ಉದ್ಘಾಟಿಸಿ ಆಶೀರ್ವಾದ ಮಾಡಿದರು.

ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಸ್ವಾಮಿ ಚಿದಾನಂದಜೀ ಮಹಾರಾಜ್ ಅವರು ವಿದ್ಯಾಕೇಂದ್ರದ ನೂತನ ಕಟ್ಟಡಕ್ಕೆ ಅಸ್ತಿಭಾರ ಶಿಲೆ ಹಾಕಿದರು. ವಿವಿಧ ಪೀಠೋಪಕರಣಗಳನ್ನೊಳಗೊಂಡಿರುವ ಏಳು ಕೊಠಡಿಗಳಲ್ಲಿ ತರಗತಿಗಳು ನಡೆಯುತ್ತಿವೆ. ಶಾಲಾ ಕಾರ್ಯಾಲಯ, ಗ್ರಂಥಾಲಯ, ಕಾರ್ಯಾಗಾರ, ಪ್ರೊಜೆಕ್ಟರ್ ಮುಂತಾದುವುಗಳಿಂದ ಸುಸಜ್ಜಿತವಾಗಿದೆ. ವ್ಯಾಯಾಮ ಇಲ್ಲಿ ಎಲ್ಲ ಮಕ್ಕಳಿಗೂ ಕಡ್ಡಾಯ. ಮಕ್ಕಳು ಸಮವಸ್ತ್ರ ತೊಟ್ಟು ಬ್ಯಾಂಡ್ ಸೆಟ್‌ನೊಂದಿಗೆ ಹೆಜ್ಜೆ ಹಾಕುತ್ತ ಮಾಡುವ ಕವಾಯಿತು ಇಡೀ ಹಳ್ಳಿಯ ಹಿರಿಯರಿಗೆ ಹೊಸ ಹರುಷ ತರುತ್ತಿದೆ. ಪ್ರತಿ ನಿತ್ಯ ೩೦೦ಕ್ಕೂ ಹೆಚ್ಚು ಶಾಲಾ ಮಕ್ಕಳಿಗೆ ಮಧ್ಯಾಹ್ನದ ವೇಳೆ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದೆ. ಪ್ರಕೃತಿಯ ಮಡಿಲಲ್ಲಿರುವ ಈ ಗ್ರಾಮಗಳ ಮಕ್ಕಳಿಗೆ ಪರಿಸರದ ಪ್ರಜ್ಞೆ ಮೂಡಿಸುವ, ಪಶು-ಪಕ್ಷಿ-ಪ್ರಾಣಿಗಳು ಗಿಡ-ಮರಗಳ ಬಗೆಗೆ ತಿಳಿವಳಿಕೆ ನೀಡುವ, ಆಸಕ್ತಿ ಕೆರಳಿಸುವ ಶಿಬಿರಗಳನ್ನು ನಡೆಸಲಾಗುತ್ತಿದೆ.



ಪೂಜ್ಯ ಸ್ವಾಮಿ ರಂಗನಾಥಾನಂದಜಿಯವರು ವಿದ್ಯಾರ್ಥಿಯೊಬ್ಬನಿಗೆ ಬಹುಮಾನ ನೀಡುತ್ತಿರುವುದು

ಹಳ್ಳಿಯ ಜನರ ಜೀವನೋಪಾಯಕ್ಕೆ ಬೇಕಾದ ವೃತ್ತಿಶಿಕ್ಷಣ ವಿಭಾಗವೊಂದನ್ನು ತೆರೆದು ದೊಡ್ಡ ಮಕ್ಕಳಿಗೆ ಹೊಲಿಗೆ, ನೇಯ್ಗೆ ಮುಂತಾದು

ವುಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಜೇನು ಸಾಕಣೆಯನ್ನು ಇಲ್ಲಿ ಉಪಕಸುಬಾಗಿ ಕಲಿಸಲಾಗುತ್ತಿದೆ. ಗಂಧದ ಕಡ್ಡಿ ತಯಾರಿಕೆಯಲ್ಲೂ ತರಬೇತಿ ನೀಡಲಾಗುತ್ತಿದೆ. ೧೯೮೬ರಲ್ಲಿ ಮೈಸೂರು ಶ್ರೀರಾಮಕೃಷ್ಣಾಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಸೋಮನಾಥಾನಂದಜಿ ಮಹಾರಾಜ್ ಅವರು ಈ ವೃತ್ತಿ ವಿಭಾಗವನ್ನು ಉದ್ಘಾಟಿಸಿದರು. ಈ ಗ್ರಾಮಗಳ ತಾಯಂದಿರಿಗೆ ತಾಯಿ-ಶಿಶು ಆರೋಗ್ಯದ ಮೇಲೆ ಹಾಲು, ಬೆಣ್ಣೆ, ಮೊಸರಿನ ಪ್ರಭಾವ ಇತ್ಯಾದಿ ಕುರಿತು ವಿಶೇಷ ತಿಳಿವಳಿಕೆ ನೀಡಲಾಗುತ್ತಿದೆ.

ಆಧುನಿಕ ಕೃಷಿ ಉಪಕರಣಗಳನ್ನೇ ಬಳಸಲು ಗೊತ್ತಿರದಿದ್ದ 'ಸೊಳ್ಳೆಪುರ' ಈಗ 'ವಿವೇಕಾನಂದಪುರ'ವಾಗಿದೆ. ಕೇವಲ ಗುಡ್ಡಗಾಡು ಜನರಿಂದ ಕೂಡಿದ್ದ ಈ ಸಣ್ಣ ಗ್ರಾಮದಲ್ಲಿ ಈಗ ಎತ್ತು-ನೇಗಿಲುಗಳನ್ನು ಬಳಸಿ ರಾಗಿ ಮುಂತಾದ ಬೆಳೆಗಳು ಎಕರೆಗೆ ೧೫ರಿಂದ ೨೦ ಕ್ವಿಂಟಾಲ್‌ವರೆಗೆ ಬೆಳೆಯುವ ಸ್ಥಿತಿ ತಲುಪಿದೆ.


ಪೂಜ್ಯ ಸ್ವಾಮಿ ಹರ್ಷಾನಂದಜಿಯವರು ಬಾಲಕಿಯೊಬ್ಬಳಿಗೆ ಸಮವಸ್ತ್ರ ವಿತರಿಸುತ್ತಿರುವುದು.

ಭೂಮಿಯ ಪರೀಕ್ಷೆ ಮಾಡಿಸಿ ಪುಕ್ಕಟೆ ಹಾಗೂ ರಿಯಾಯಿತಿ ಬೆಲೆಯಲ್ಲಿ ಕಬ್ಬಿಣದ ನೇಗಿಲುಗಳನ್ನೂ, ಬೀಜ ಬಿತ್ತುವ ಹಾಗೂ ಗೊಬ್ಬರವನ್ನು ಹಾಕುವ ಡ್ರಿಲ್ಲರ್ ಗಳನ್ನೂ, ಎತ್ತುಗಳನ್ನೂ, ರಾಸಾಯನಿಕ ಗೊಬ್ಬರವನ್ನೂ, ಕಸಿ ಮಾಡಿದ ಸಹಸ್ರಾರು ತೆಂಗು-ಮಾವಿನ ಸಸಿಗಳನ್ನೂ, ಸರಬರಾಜು ಮಾಡಲಾಗುತ್ತಿದೆ. ನಿರ್ಗತಿಕರಿಗೆ ಮನೆಗಳನ್ನು ಕಟ್ಟಿಸಿಕೊಡುವ ಜೊತೆಗೆ ಬ್ಯಾಂಕುಗಳಿಂದ ಸಾಲಗಳನ್ನು ಕೊಡಿಸಲಾಗುತ್ತಿದೆ.

೧೯೮೪ರಲ್ಲೇ ಆರಂಭವಾದ ಸಂಚಾರಿ ಆಸ್ಪತ್ರೆ ಈಗ ಸುವ್ಯವಸ್ಥಿತವಾದ ಒಂದು ಆರೋಗ್ಯ ಕೇಂದ್ರವಾಗಿದೆ. ಸ್ವಂತ ಕಟ್ಟಡ ನಿರ್ಮಾಣವಾಗಿದೆ. ಶಿವನ ಹಳ್ಳಿಯಲ್ಲಿರುವ ಈ ಕೇಂದ್ರದಲ್ಲಿ ಹಳ್ಳಿಗರ ಆರೋಗ್ಯ ತಪಾಸಣೆ ಮಾಡಿ ಉಚಿತ ಔಷಧಿಗಳನ್ನು ಹಂಚಲಾಗುತ್ತಿದೆ. ಬೆಂಗಳೂರಿನ ವಿವಿಧ ಆಸ್ಪತ್ರೆಗಳಲ್ಲಿರುವ ತಜ್ಞ ವೈದ್ಯರ ಹಾಗೂ ರಾಮಕೃಷ್ಣಾಶ್ರಮದಲ್ಲಿ ಓದಿ ವಿದ್ಯಾವಂತರಾದ ವೈದ್ಯರ ತಂಡವೊಂದು ಶಿವನಹಳ್ಳಿ ಕೇಂದ್ರಕ್ಕೆ ಭೇಟಿ ನೀಡಿ ಆರೋಗ್ಯ ತಪಾಸಣೆ ಚಿಕಿತ್ಸೆ ನೀಡುತ್ತಿದೆ. ಈ ೧೫-೧೬ ವರ್ಷಗಳಲ್ಲಿ ಹತ್ತಾರು ಗ್ರಾಮಗಳ ಸುತ್ತ ಮುತ್ತಲಿನ ಹತ್ತು ಲಕ್ಷ ಗ್ರಾಮಸ್ಥರು ಉಚಿತ ಚಿಕಿತ್ಸೆ ಪಡೆದಿದ್ದಾರೆ. ದೂರದ ಗ್ರಾಮಗಳಿಂದಲೂ ಜನರು ಬಂದು ತಪಾಸಣೆ-ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರು ಶ್ರೀರಾಮಕೃಷ್ಣ ಮಠದ ಉಪಕೇಂದ್ರವಾಗಿದ್ದ ಇದು ಈಗ ರಾಮಕೃಷ್ಣ ಮಿಷನ್ನಿನ ಅಧಿಕೃತ ಕೇಂದ್ರವಾಗಿ ಪರಿಗಣಿಸಲ್ಪಟ್ಟಿದ್ದು, ೧೯೯೬ ರಲ್ಲಿ ಮಿಷನ್ನಿನ ಆಗಿನ ಕಾರ್ಯದರ್ಶಿಗಳಾದ ಸ್ವಾಮಿ ಆತ್ಮಸ್ಥಾನಂದಜಿಯವರು ಇದನ್ನು ನೂತನ ಕೇಂದ್ರವೆಂದು ಅಧಿಕೃತವಾಗಿ ಉದ್ಘಾಟಿಸಿದರು. ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾಗಿರುವ ಸ್ವಾಮಿ ಹರ್ಷಾನಂದಜಿಯವರೇ ಇದರ ಕಾರ್ಯದರ್ಶಿಗಳೂ ಆಗಿದ್ದಾರೆ. ಇವರ ಸಮರ್ಥ ಮಾರ್ಗದರ್ಶನದಲ್ಲಿ ಸೇವಾಕಾರ್ಯಗಳು ನಿಯಮಿತವಾಗಿ ನಡೆದು ಕೊಂಡು ಹೋಗುತ್ತಿವೆ. ಬೆಂಗಳೂರು ಮಠವೇ ಅಲ್ಲದೇ, ಶಿವನಹಳ್ಳಿ ಮತ್ತಿತರ ಗ್ರಾಮಗಳ ದತ್ತು ಕಾರ್ಯ ಒಂದು 'ಯಜ್ಞ'ದ ರೀತಿಯಲ್ಲಿ ನಡೆಯುತ್ತಿದೆ. ಮೊದಲಿನಿಂದಲೂ ಈ ಕಾರ್ಯದ ವ್ಯವಸ್ಥಾಪಕರಾಗಿರುವ ಸ್ವಾಮಿ ವಿಷ್ಣುಮಯಾನಂದಜಿಯವರ ಶ್ರಮವರಿಯದ ಸುದೀರ್ಘ ಸತತ ಪ್ರಯತ್ನ ಈ ಸೇವಾಕಾರ್ಯದ ಯಶಸ್ಸಿನ ಹಿಂದಿರುವುದು ಮರೆಯಲಾಗದ ಅಂಶ. ಸದ್ಗುರು ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಅವರ ಲೋಕೋತ್ತರ ಶಿಷ್ಯ ಸ್ವಾಮಿ ವಿವೇಕಾನಂದರ ಸಂದೇಶಗಳ ಪ್ರಸಾರ ಈ ಹಳ್ಳಿಗಳಲ್ಲಿ ಯಾವ ಸದ್ದು-ಗದ್ದಲ-ಪ್ರಚಾರದ ಭರಾಟೆ, ಅಪೇಕ್ಷೆಯೂ ಇಲ್ಲದೆ ನಡೆಯುತ್ತಿದೆ. ಈ ಸಮಾಜ ಕಾರ್ಯ ನಮ್ಮ ಸರಕಾರಗಳು, ಸ್ವಯಂ ಸೇವಾಸಂಸ್ಥೆಗಳಿಗೆ ಮಾದರಿಯಾಗಿದೆ, ಆದರ್ಶಪ್ರಾಯವಾಗಿದೆ.

ಶಿವನಹಳ್ಳಿ ಮತ್ತು ಸುತ್ತಮುತ್ತಲ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಪ್ರತಿ ತಿಂಗಳಿಗೆ ಸುಮಾರು ಒಂದು ಲಕ್ಷ ರೂಪಾಯಿ ವೆಚ್ಚವಾಗುತ್ತದೆ. ಸದ್ಯಕ್ಕೆ ಈ ಹಣ ಭಕ್ತಾದಿಗಳಿಂದ ವಿವಿಧ ರೂಪದಲ್ಲಿ ಒದಗುತ್ತಿದ್ದರೂ ಈ ಗ್ರಾಮಸೇವಾ ಕಾರ್ಯಕ್ಕೆ ಒಂದು ಆವರ್ತನಿಧಿ ಕೂಡಿಸಿ ಅದರ ಬಡ್ಡಿಯಿಂದ ಬರುವ ಹಣದಲ್ಲಿ ಸೇವಾಕಾರ್ಯ ನಿರಂತರವಾಗಿ ನಡೆದು ಕೊಂಡು ಹೋಗಬೇಕು ಎಂಬುದು ಬೆಂಗಳೂರಿನ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅವರ ಅಪೇಕ್ಷೆ. ಇವರು ಅಧ್ಯಕ್ಷರಾದಾಗಿನಿಂದ ಶಿವನಹಳ್ಳಿಯ ಗ್ರಾಮಸೇವಾ ಯಜ್ಞವನ್ನು ಕ್ರಮಬದ್ಧವಾಗಿ ದಕ್ಷತೆಯಿಂದ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಆದರೆ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಶ್ರೀರಾಮಕೃಷ್ಣ-ಸ್ವಾಮಿ ವಿವೇಕಾನಂದರ ಸ್ಫೂರ್ತಿ-ಪ್ರೇರಣೆ ಪಡೆದಿರುವ, ಇಂದಿಗೂ ಪಡೆಯುತ್ತಿರುವ ಭಕ್ತಾದಿಗಳು ಈ ಮಹಾನ್ ಕಾರ್ಯದಲ್ಲಿ ಹೆಗಲೆಣೆಯಾಗಿ ನಿಂತು ನಿರ್ವಹಿಸಬೇಕಾಗಿದೆ.

ಬೆಂಗಳೂರು ರಾಮಕೃಷ್ಣ ಮಠ ಕೈಗೊಂಡಿರುವ ಶಿವನಹಳ್ಳಿ, ರಾಗಿಹಳ್ಳಿ ಮೊದಲಾದ ೧೪ ಗ್ರಾಮಗಳ ಸೇವಾ 'ಯಜ್ಞ'ಕ್ಕೆ [illegible] ಜನಿಕರ, ಸ್ವಯಂಸೇವಾ ಸಂಸ್ಥೆಗಳ ಕೈಂಕರ್ಯ [illegible]' ❖